ಇದರಲ್ಲಿ ನ್ಯೂನತೆಗಳು ಕಂಡು ಬಂದಿದ್ದರಿಂದ ಅದನ್ನು ಪರಿಶೀಲಿಸಿ ಸರಿಪಡಿಸಿ ಸಲ್ಲಿಸುವ ಸಲುವಾಗಿ ಉಪವಿಭಾಗಾಧಿಕಾರಿಗಳು, ಜಮಖಂಡಿ ಇವರಿಗೆ ಕಳಿಸಲಾಗಿದೆ. ಉಪವಿಭಾಗಾಧಿಕಾರಿಗಳು, ಜಮಖಂಡಿ ಇವರಿಂದ ತ್ವರಿತವಾಗಿ ವರದಿಯನ್ನು ತರಿಸಿಕೊಂಡು ಅರ್ಹರಿಗೆ ಬೆಳೆ ಪರಿಹಾರ ಧನವನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಋ) ಜಮಖಂಡಿ ತಾಲ್ಲೂಕಿನಲ್ಲಿ ಈ ಕೆಳಗಿನ 6 ಗ್ರಾಮಗಳನ್ನು ಸ್ಥಳಾಂತರಿಸಲು ನಿರ್ಧರಿಸಲಾಗಿದೆ.

1. ಅಸ್ಕಿ (ಪೂರ್ತಿ ಸ್ಥಳಾಂತರ)
2. ತಮದಡ್ಡಿ (ಪೂರ್ತಿ ಸ್ಥಳಾಂತರ)
3. ಮದನಮಟ್ಟಿ (ಪೂರ್ತಿ ಸ್ಥಳಾಂತರ)
4. ಹಳಿಂಗಳಿ (ಪೂರ್ತಿ ಸ್ಥಳಾಂತರ)
5. ಹಿಪ್ಪರಗಿ (ಭಾಗಶಃ ಸ್ಥಳಾಂತರ)
6. ಕುಲ್ಲಳ್ಳಿ (ಭಾಗಶಃ ಸ್ಥಳಾಂತರ)

ಎ) ದಿನಾಂಕ: 16,17–11–05 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರವಾಹಪೀಡಿತ ಹಳ್ಳಿಗಳನ್ನು ಸ್ಥಳಾಂತರಿಸಲು ತೀರ್ಮಾನಿಸಿದ್ದು, ಪರಿಹಾರ ನೀಡುವ ಬಗ್ಗೆ ಇನ್ನು ತೀರ್ಮಾನಿಸಿಲ್ಲ.

ಏ) ಪ್ರವಾಹದಲ್ಲಿ 119 ಪೂರ್ಣ ಹಾಗೂ 376 ಭಾಗಶಃ ಹೀಗೆ ಒಟ್ಟು 495 ಮನೆಗಳು ಹಾನಿಯಾಗಿದ್ದು, ಸಿ.ಆರ್.ಎಫ್. ಮಾರ್ಗಸೂಚಿಯ ಮೇರೆಗೆ ಒಟ್ಟು ರೂ. 7,89,800–00 ಪರಿಹಾರ ಧನವನ್ನು ಚೆಕ್ ಮೂಲಕ ವಿತರಿಸಲಾಗಿದೆ. ಜಮಖಂಡಿ ತಾಲ್ಲೂಕಿಗೆ 155 ಮನೆಗಳನ್ನು ಆಶ್ರಯ ಮನೆ ಯೋಜನೆಯ ಮಾದರಿಯಂತೆ ನಿರ್ಮಿಸುವ ಬಗ್ಗೆ ತಾಲ್ಲೂಕು ಪಂಚಾಯಿತಿ ಜಮಖಂಡಿ ಇವರ ಮುಖಾಂತರ ಕ್ರಿಯಾ ಯೋಜನೆ ತಯಾರಿಸಿದೆ.

658 (1284) ಶ್ರೀ ರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಬಿಡುಗಡೆ ಮಾಡಿರುವ ಸಬ್ಸಿಡಿ ಹಣ ಎಷ್ಟು;

ಆ) ಸರ್ಕಾರದಲ್ಲಿ ಇನ್ನೂ ಬಾಕಿ ಇರುವ ಸಬ್ಸಿಡಿ ಹಣ ಎಷ್ಟು;

ಇ) ಬಾಕಿ ಇರುವ ಸಬ್ಸಿಡಿ ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಶಿವಾನಂದ ಎಸ್. ನಾಯಕ್ (ಸಣ್ಣ ಕೈಗಾರಿಕಾ ಸಚಿವರು) :

ಅ) ರೂ. 230.10 ಕೋಟಿಗಳು

ವರ್ಷ	ಬಿಡುಗಡೆಯಾದ ಮೊತ್ತ (ರೂ. ಕೋಟಿಗಳಲ್ಲಿ)
2003–04	–
2004–05	146.00
2005–06	84.10
ಒಟ್ಟು	**230.10**

ಆ) ರೂ. 256.06 ಕೋಟಿಗಳು

ಇ) ಉಳಿದ ಸಹಾಯಧನವನ್ನು ಅನುದಾನ ಲಭ್ಯತೆಯ ಆಧಾರದ ಮೇಲೆ 2006–07 ಹಾಗೂ ನಂತರದ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

659 (1285) ಶ್ರೀ ಶ್ರೀರಾಮರೆಡ್ಡಿ ಜಿ.ವಿ (ಬಾಗೇಪಲ್ಲಿ): ಮಾನ್ಯ ಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಸಾಲಿನಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿ ವತಿಯಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದೇ?

ಆ) ಹಾಗಿದ್ದಲ್ಲಿ, ಕಳೆದ ಎರಡು ತಿಂಗಳ ಹಿಂದೆ ಸಲ್ಲಿಸಲಾಗಿರುವ ಕ್ರಿಯಾ ಯೋಜನೆಯ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ರಾಮಚಂದ್ರ ಗೌಡ (ಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಸಚಿವರು) :

ಅ) ತೆಗೆದುಕೊಳ್ಳಲಾಗುವುದು.

ಆ) ಮಂಡಳಿಯು 2006–07ನೇ ಸಾಲಿನ ಕ್ರಿಯಾ ಯೋಜನೆಯನ್ನು ಇನ್ನು ಸಲ್ಲಿಸಿಲ್ಲ.

660 (822) ಶ್ರೀಮತಿ ಸುನಿತ ವೀರಪ್ಪನಗೌಡ ಜೆ. (ಬನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ರೈತರಿಗೆ ಶೀಘ್ರವಾಗಿ ಹಾಗೂ ಸ್ಥಳೀಯವಾಗಿ ದೊರೆಯುವಂತೆ ನಾಡ ಕಛೇರಿಗಳಲ್ಲಿ ರೆಕಾರ್ಡ್ ಆಫ್ ರೈಟ್ಸ್, ಗೇಣಿ ಮತ್ತು ಪಹಣಿ ಪತ್ರ (ಆರ್.ಟಿ.ಸಿ.) ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೆ;

ಆ) ಪ್ರಸಕ್ತ ತಾಲ್ಲೂಕು ಕಛೇರಿಗಳಲ್ಲಿ ಆರ್.ಟಿ.ಸಿ.ಯಲ್ಲಿನ ನ್ಯೂನತೆ ಸರಿಪಡಿಸಲು ರೈತರಿಗೆ ಅಧಿಕಾರಿ / ನೌಕರುಗಳಿಂದ ಉಂಟಾಗುವ ಕಿರುಕುಳವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ (PPP) "ಗ್ರಾಮೀಣ ಗಣಕೀಕೃತ ಸೇವೆಗಳು" ಯೋಜನೆಯಡಿ ಟೆಲಿ ಸೆಂಟರ್‌ಗಳನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದ್ದು, ಗಣಕೀಕೃತ ಪಹಣಿಗಳನ್ನು ವಿತರಿಸುವುದು ಈ ಟೆಲಿ ಸೆಂಟರ್‌ಗಳ ಭಾಗವಾಗಿರುತ್ತದೆ ಈ ಕುರಿತು ಆರ್.ಎಫ್.ಪಿ.ಯನ್ನು ಹೊರತರಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

661 (581) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಿತ್ತೂರು ಪಟ್ಟಣಕ್ಕೆ ಉಪ ನೋಂದಣಿ ಅಧಿಕಾರಿಗಳ ಕಛೇರಿ ಮಂಜೂರಾತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು?